# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC No.100/2025**

**CW: 02 P W : 02**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 18.12.2025**

| | |
|---|---|
| ಹೆಸರು | : ಗುಂಡಪ್ಪ ಸರಡಗಿ |
| ತಂದೆಯ ಹೆಸರು | : ಮಲ್ಲೇಶಿ |
| ವಯಸ್ಸು | : 40 |
| ಉದ್ಯೋಗ | : ಕಾರ್ಮಿಕ |
| ವಾಸಸ್ಥಳ | : ಕೊಳ್ಳಾ ಫೈಲ್, ಶಹಾಬಾದ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 1 ಹಾಗೂ 3 ಇವರ ಪರಿಚಯ ಇರುವುದಿಲ್ಲ. ಈ ಹಂತದಲ್ಲಿ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದು ಜಪ್ತಿ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಬಿ) ಎಂದು ಗುರುತಿಸಲಾಯಿತು.

ಯಾವ ಕಾರಣಕ್ಕಾಗಿ ನಾನು ನಿ.ಪಿ.1 ರ ಮೇಲೆ ಸಹಿ ಹಾಕಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ನಿ.ಪಿ.1 ರಂತೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಪಂಚನಾಮೆಯನ್ನು ಮಾಡಿ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ.06/04/2024 ರಂದು ರಾತ್ರಿ 8.30 ಗಂಟೆ ಸುಮಾರಿಗೆ ಶಹಾಬಾದ ಪಟ್ಟಣದಿಂದ ತರನಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಮೇಲೆ ಅಬಕಾರಿ ಪೋಲೀಸರು ದ್ವಿಚಕ್ರ ವಾಹನದ ಮೇಲೆ ನನ್ನ ಮತ್ತು ಚಾಸಾ-1 ರವರ ಸಮಕ್ಷಮ ದಾಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಬಕಾರಿ ಪೋಲೀಸರು ಸ್ಥಳದಲ್ಲಿಯೇ ಶೋಧನ ಪತ್ರವನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತನ ಮನೆಯಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 1) 90 ಎಮ್.ಎಲ್.ನ ಒರಿಜಿನಲ್ ಚಾಯ್ಸ ವಿಸ್ಕಿ 96 ಟೆಟ್ರಾ ಪ್ಯಾಕಗಳು, 2) 180 ಎಮ್.ಎಲ್.ನ ಬ್ಯಾಗ ಪೈಪರ್ ವಿಸ್ಕಿ 48 ಟೆಟ್ರಾ ಪ್ಯಾಕಗಳು, 3) 650 ಎಮ್.ಎಲ್.ನ ಕಿಂಗ ಫಿಷರ್ ಬಿಯರ ನ 24 ಬಾಟಲಗಳು, 4) 650

ಎಮ್.ಎಲ್.ನ ಪವರ ಕೂಲ್ ಬಿಯರ ನ 24 ಬಾಟಲಗಳು, 4) 330 ಎಮ್.ಎಲ್.ನ ಕಿಂಗ ಫಿಷರ್ ಬಿಯರ 24 ಟಿನಗಳು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಆರೋಪಿತನು ಸದರಿ ಮದ್ಯವನ್ನು ಮಾರಾಟಕ್ಕೆ ಸಂಗ್ರಹಿಸಿಟ್ಟಿರುತ್ತಾನೆ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡ ಮುದ್ದೆ ಮಾಲಿನಿಂದ ರಾಸಾಯನಿಕ ಪರೀಕ್ಷೆಗಾಗಿ 180 ಎಮ್.ಎಲ್.ನ ಬಾಟಲಿಯಲ್ಲಿ ಮಾದರಿಯನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಪಂಚನಾಮೆಯನ್ನು ರಾತ್ರಿ 9.30 ರಿಂದ 10.30 ರವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಚಾಸಾ-3 ರವರು ಜಪ್ತಿ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದ್ವಿಚಕ್ರ ವಾಹನದ ಸಂಖ್ಯೆ ಕೆ.ಎ-32, ಯು-1747 ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರೋಪಿತನ ಹೆಸರು ಮಲ್ಲಿಕಾರ್ಜುನ ಆಗಿರುತ್ತದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ ಗಳು, ಶಹಾಬಾದ**